Staff of the Mines and Geology Department in Bangalore City.

215. SRI MALLUR ANANDA RAO (Rajajinagar).—Will the Chief Minister be pleased to state.—

(a) The total number of Class-I, Class-II and Class-III Officers and officials working in the offices of the Department of Mines and Geology situated in the Bangalore City.

(b) The names of the officials with their designations who are staying in Bangalore City for more than 5 years, 10 years, 15 years and 20 years (Category-wise particulars may be given);

(c) whether the normal rules and practice of transfer adopted in respect of Government officials in other departments are being followed in the case of these officials also ? If not the reasons for the same ?

SRI R. GUNDU RAO (Chief Minister).—

(a) 212.

(b) *Vide* statement laid on the Table of the House. *

(c) Yes, Reply to point-2 does not arise.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ತಮ್ಮ ಉತ್ತರದಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ೫ ರಿಂದ ೧೦ ವರ್ಷಗಳಿಗೂ ಮೇಲ್ಪಟ್ಟು ಕೆಲಸ ಮಾಡತಕ್ಕವರು ೫೪ ಜನ, ೧೦ ರಿಂದ ೧೫ ವರ್ಷಗಳ ಕಾಲ ಒಂದೇ ಸ್ಥಳದಲ್ಲಿ ಕೆಲಸ ಮಾಡಿದವರು ೨೦ ಜನ, ೧೫ ವರ್ಷಕ್ಕೂ ಮೇಲ್ಪಟ್ಟು ಕೆಲಸ ಮಾಡುತ್ತಿರುವವರು ಒಬ್ಬರೇ ಒಬ್ಬರು ಎಂದು ತಿಳಿಸಿದ್ದೀರಿ. ಒಟ್ಟು ೭೫ ಜನ ಕೆಲಸ ಮಾಡುತ್ತಿದ್ದಾರೆ. ೨೧೨ ಜನರಲ್ಲಿ ೭೫ ಜನ ಹೋದರೆ ಇನ್ನು ೧೩೭ ಜನ ಇದ್ದಾರಲ್ಲ ಇವರ ಗತಿ ಏನು ? ಇವರುಗಳು ಎಷ್ಟು ಎಷ್ಟು ವರ್ಷಗಳಿಂದ ಒಂದೇ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದಾರೆ ?

ಶ್ರೀ ಆರ್. ಗುಂಡೂರಾವ್.—ಪೂರ್ಣ ವಿವರಗಳನ್ನು ಈಗಾಗಲೇ ಒದಗಿಸಿದ್ದೇನೆ. ಕೆಲವರು ಡೆಪ್ಯೂಟೇಷನ್ ಮೇಲೆ ಬಂದಿದ್ದಾರೆ, ಟೆಕ್ನಿಕಲ್ ಇಲಾಖೆಯಿಂದ ಕೆಲವರು ಬಂದು ಕೆಲಸ ಮಾಡುತ್ತಿದ್ದಾರೆ. ಇನ್ನೂ ಹೆಚ್ಚಿನ ವಿವರ ಬೇಕಾಗಿದ್ದರೆ ಬೇರೆ ಪ್ರಶ್ನೆ ಮೂಲಕ ಕೇಳಿದರೆ ಒದಗಿಸುತ್ತೇನೆ.

ಶ್ರೀ ಮಳೂ ರು ಆನಂದರಾವ್.—ಮಾನ್ಯ ಅಧ್ಯಕ್ಷರೇ, ೫ ವರ್ಷಗಳ ಮೇಲೆ ಒಂದೇ ಸ್ಥಳದಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ? ೧೦ ವರ್ಷಗಳ ಮೇಲೆ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ? ೨೦ ವರ್ಷಗಳ ಮೇಲೆ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ? ಸ್ವಾಮಿ, ಲಿಸ್ಟ್ ಇದೆ, ಮಾನ್ಯ ಮುಖ್ಯ ಮಂತ್ರಿಗಳ ಬಳಿ ಇದೆಯೋ ಇಲ್ಲವೋ ಗೊತ್ತಿಲ್ಲ. ೧೫–೨೦ ವರ್ಷಗಳಿಗೂ ಮೇಲ್ಪಟ್ಟು ಒಂದೇ ಸ್ಥಳದಲ್ಲಿ ಕೆಲಸ ಮಾಡುತ್ತಿರುವವರು ಎಷ್ಟು ಜನ ಇದ್ದಾರೆ ?

ಶ್ರೀ ಆರ್. ಗುಂಡೂರಾವ್.—ಕೆಲವರು ಇರಬಹುದು.

ಶ್ರೀ ಮಳ್ಳೂರು ಆನಂದರಾವ್.—ಇರಬಹುದೂ ಅಂದರೆ ಏನು ಅರ್ಥ ಸ್ವಾಮಿ ? ನಾನು ಕೇಳತಕ್ಕ ಪ್ರಶ್ನೆಯಲ್ಲಿ ಉದ್ದೇಶ ಇದೆ, ಇರಬಹುದು ಅಂದರೆ ಯಾವರೀತಿ ಇರಬಹುದು ?

---

* Copy placed in the Karnataka Legislature Library, *Vide* No. 10, dated 26th March 1980.

ಶ್ರೀ ಆರ್. ಗುಂಡೂರಾವ್.—ಪಟ್ಟಿಯಲ್ಲಿ ವಿವರವಾಗಿ ಇದೆ, ಇನ್ನೂ ವಿವರ ಬೇಕೆಂದರೆ ಬೇರೆ ಪ್ರಶ್ನೆ ಕೇಳಲಿ.

ಅಧ್ಯಕ್ಷರು.—ತಾವು ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ಕ್ಲಾಸ್ ೨ ಳ ಜನರ ಪಟ್ಟಿ ಕೊಟ್ಟಿದ್ದಾರೆ. ಇದರಲ್ಲಿ ಗೆಜೆಟೆಡ್ ಆಸಿಸ್ಟೆಂಟ್ ಎಂ ನಾಗಪ್ಪ ಎನ್ನುವವರು ೨೦ ವರ್ಷಗಳಿಂದ ಒಂದೇ ಜಾಗದಲ್ಲಿ ಕೂತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳ ಮಾಹಿತಿ ಇಡೀ ಸದನವನ್ನು ತಪ್ಪುದಾರಿಗೆ ಎಳೆಯುವಂತಾದ್ದಾಗಿದೆ. ಸರ್ಕಾರಿ ಅಧಿಕಾರಿಗಳನ್ನು ಇಷ್ಟು ವರ್ಷಗಳ ಮೇಲೆ ವರ್ಗ ಮಾಡಬೇಕೆಂದು ಸರ್ಕಾರಿ ನಿಯಮ ಇದೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಬೇರೆ ನಿಯಮ ಇದೆಯೆ ? ಈ ಇಲಾಖೆಯಲ್ಲಿ ಕಳೆದ ೧೫–೨೦ ವರ್ಷಗಳಿಂದಲೂ ಒಂದೇ ಜಾಗದಲ್ಲಿ ಇರುವವರನ್ನು ಏತಕ್ಕೆ ವರ್ಗ ಮಾಡಿಲ್ಲ ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಸದಸ್ಯರ ಸಲಹೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

MR. SPEAKER.—If you so feel, you may send a notice and I will post it for half an hour discussion and in the meanwhile, you can collect the information.

ಶ್ರೀ ಮಳ್ಳೂರು ಆನಂದರಾವ್.—ವರ್ಗಾವಣೆಗೆ ಸಂಬಂಧಪಟ್ಟಂತೆ ಇರತಕ್ಕ ನಿಯಮ ಎಲ್ಲಾ ಇಲಾಖೆಗೂ ಅನ್ವಯವಾಗುತ್ತದೆಂದು ಹೇಳಿದ್ದಾರೆ. ಹಾಗಿದ್ದ ಮೇಲೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ೫ ವರ್ಷಕ್ಕೆ ಮೇಲ್ಪಟ್ಟು ಒಂದೇ ಜಾಗದಲ್ಲಿ ಯಾರು ಯಾರಿದ್ದಾರೆ ಅಂಥವರನ್ನು ಕೂಡಲೇ ವರ್ಗ ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೆ ?

ಶ್ರೀ ಆರ್. ಗುಂಡೂರಾವ್.—ಕೆಲವು ವಿಶೇಷ ಸಂದರ್ಭಗಳಲ್ಲಿ ಬೇಕಾದಂತ ವ್ಯಕ್ತಿಗಳನ್ನು ಸರ್ಕಾರ ಮುಂದುವರಿಸಿಕೊಂಡು ಬಂದಿರಬಹುದು. ಕೆಲವು ಕೆಲಸವನ್ನು ನಿರ್ವಹಿಸಲು ಬೇಕಾದಂತಹ ಜ್ಞಾನವನ್ನು ಪಡೆದಿರುವವರೆ ಬೇರೆಯವರು ಸಿಕ್ಕದಿರುವ ಪ್ರಯುಕ್ತ ಅವರನ್ನೇ ಮುಂದುವರಿಸಿಕೊಂಡು ಬಂದಿರಬಹುದು. ಆ ಬಗ್ಗೆ ಯೋಚನೆ ಮಾಡೋಣ.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಮುಖ್ಯ ಮಂತ್ರಿಗಳು ಸಂಬಂಧಪಟ್ಟ ಫೈಲನ್ನು ಓದಿಲ್ಲವೆಂದು ಕಾಣುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಹೀಗಿರಬಹುದು, ಹಾಗಿರಬಹುದು ಎಂದು ಉತ್ತರವನ್ನು ಕೊಡುತ್ತಿದ್ದಾರೆ, ಹೀಗೆ ಉತ್ತರವನ್ನು ಕೊಡಬಾರದು. ಇಂತಹವರನ್ನು ಡೆಪ್ಯುಟೇಷನ್‌ಗೆ ತೆಗೆದುಕೊಂಡಿರಬಹುದು ಎಂದು ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟರೆ ಸರಿ ಹೋಗುವುದಿಲ್ಲ. ಈ ಗಣಿ ಹಾಗೂ ಭೂ ವಿಜ್ಞಾನ ಇಲಾಖೆಯ ಕಛೇರಿಯಲ್ಲಿ ಒಬ್ಬ ಅಧಿಕಾರಿಯವರು ೧೦ ವರ್ಷಗಳಿಂದ ಇದ್ದು ನಮ್ಮ ಕರ್ನಾಟಕದ ಸಂಪತ್ತನ್ನು ಕೊಳ್ಳೆಹೊಡೆಯತಕ್ಕ ಕಾರ್ಯದಲ್ಲಿ ಪ್ರೈವೇಟ್ ಏಜೆನ್ಸಿಯವರಿಗೆ ಸಹಾಯಕರಾಗಿದ್ದಾರೆ. ಆದ್ದರಿಂದ ಇಲ್ಲಿ ಸಮಗ್ರ ತನಿಖೆ ಮಾಡಿ ಯಾರು ಯಾರು ೫ ವರ್ಷಗಳ ಮೇಲ್ಪಟ್ಟು ಒಂದೇ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರಿಗೆ ವರ್ಗಾವಣೆ ಮಾಡಬೇಕೆಂದು, ಸ್ಪಾನ ಪಲ್ಲಟ ಮಾಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಆರ್. ಗುಂಡೂರಾವ್.—ನಾನು ಈ ಬಗ್ಗೆ ಕೊಟ್ಟ ಉತ್ತರ ಸರಿಯಾಗಿ ಇದೆ. ಮಾನ್ಯ ಸದಸ್ಯರು ಏನನ್ನೋ ಮನಸ್ಸಿನಲ್ಲಿಟ್ಟುಕೊಂಡು ಪ್ರಶ್ನೆಯನ್ನು ಪದೇ ಪದೇ ಸುತ್ತಿಸುತ್ತಿ ಕೇಳುತ್ತಿದ್ದಾರೆ. ಈಗ ಮಾನ್ಯ ಸದಸ್ಯರು ಇಂತಿಷ್ಟು ವರ್ಷಗಳಿಂದ ಎಷ್ಟೆಷ್ಟು ಜನ ಕೆಲಸ ಮಾಡುತ್ತಿದ್ದಾರೆಂದು ಕೇಳಿರುವ ಪ್ರಶ್ನೆಗೆ ನಾನು ಉತ್ತರವನ್ನು ಒದಗಿಸಿದ್ದೇನೆ. ಇನ್ನು ಸರ್ಕಾರದ ಸಂಪತ್ತನ್ನು ಕೊಳ್ಳೆ ಹೊಡೆಯತಕ್ಕ ಕಾರ್ಯದಲ್ಲಿ ಪ್ರೈವೇಟ್ ಏಜೆನ್ಸಿಯವರಿಗೆ ಸಹಾಯಕರಾಗಿದ್ದಾರೆಂದು ಹೇಳಿದರು. ಇದರಿಂದ ಸರ್ಕಾರದ ಬೊಕ್ಕಸ ಕೊಳ್ಳೆಯಾಗುತ್ತಿದೆ ಇದರ ಬಗ್ಗೆ ತನಿಖೆ ಮಾಡಿಸಬೇಕೆಂದರು ಅದು ಬೇರೆ ವಿಷಯ. ಇದನ್ನು ಪ್ರತ್ಯೇಕವಾಗಿ ನನ್ನ ಗಮನಕ್ಕೆ ತಂದರೆ ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇನೆ.